# ಸಾಧು ಜೀವನ



ಪಂಡಿತನಿಗೂ ಸಾಧುವಿಗೂ ಅಜಗಜಾಂತರ ವ್ಯತ್ಯಾಸ. ಯಾರು ಕೇವಲ ಪಂಡಿತರೋ ಅವರಿಗೆ ಕಾಮಕಾಂಚನಗಳಲ್ಲಿ ಮನಸ್ಸಿರುತ್ತದೆ. ಆದರೆ ಸಾಧುಗಳ ಮನಸ್ಸು ಹರಿಯ ಪಾದ ಪದ್ಮಗಳಲ್ಲಿ ನೆಲೆಸಿರುತ್ತದೆ. ಪಂಡಿತ ಬಾಯಲ್ಲಿ ಹೇಳುವುದು ಒಂದು, ಕೈಯಲ್ಲಿ ಮಾಡುವುದು ಇನ್ನೊಂದು. ಸಾಧುಗಳ ಮಾತು ಬಿಟ್ಟುಬಿಡು. ಸಾಮಾನ್ಯವಾಗಿ ಯಾರು ಹರಿಯ ಪಾದಪದ್ಮಗಳಲ್ಲಿ ಮನಸ್ಸಿಟ್ಟಿರುತ್ತಾರೋ ಅವರ ಮಾತುಕತೆ, ವರ್ತನೆ ಎಲ್ಲಾ ಬೇರೆ.

ಕಾಶಿಯಲ್ಲಿ ನಾನಕ್ ಪಂಥದ ಒಬ್ಬ ಯುವಕ ಸಂನ್ಯಾಸಿಯನ್ನು ನೋಡಿದೆ. ನನ್ನನ್ನು ಸಂಬೋಧಿಸುತ್ತಿದ್ದ: 'ಪ್ರೇಮೀ ಸಾಧು' ಎಂದು. ಕಾಶಿಯಲ್ಲಿ ಅವರ ಪಂಥದ ಒಂದು ಮಠ ಇದೆ. ಅಲ್ಲಿಗೆ ಅವರು ಒಂದು ದಿನ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿನ ಮಹಂತ ಮನೆಯ ಒಳ್ಳೆ ಯಜಮಾನಿಯ ಹಾಗೆ ಕಂಡ. ಆತನನ್ನು ಕೇಳಿದೆ: 'ಮಾರ್ಗವೇನು?' ಅದಕ್ಕೆ ಆತ ಹೇಳಿದ: 'ಕಲಿಯುಗಕ್ಕೆ ನಾರದೀಯ ಭಕ್ತಿ.' ನಾನು ಹೋಗಿದ್ದಾಗ ಆತ ಸ್ತೋತ್ರಪಾಠ ಮಾಡುತ್ತಿದ್ದ. ಅದು ಮುಗಿದ ನಂತರ ಹೇಳಲಾರಂಭಿಸಿದ: 'ಜಲೇ ವಿಷ್ಣುಃ ಸ್ಥಲೇ ವಿಷ್ಣುಃ ವಿಷ್ಣುಃ ಪರ್ವತಮಸ್ತಕೇ । ಸರ್ವಂ ವಿಷ್ಣುಮಯಂ ಜಗತ್' ಜಲದಲ್ಲಿ ವಿಷ್ಣು, ಸ್ಥಳದಲ್ಲಿ ವಿಷ್ಣು, ಪರ್ವತದ ತುದಿಯಲ್ಲೂ ವಿಷ್ಣು. ಈ ಇಡೀ ಜಗತ್ತೇ ವಿಷ್ಣುಮಯ.

ಒಮ್ಮೆ ಇಲ್ಲಿಗೆ ಒಬ್ಬ ವೇದಾಂತವಾದಿ ಸಾಧು ಬಂದಿದ್ದ. ಮೇಘ ಕಣ್ಣಿಗೆ ಬಿತ್ತು ಎಂದರೆ ನರ್ತಿಸುತ್ತಿದ್ದ. ಬಿರುಗಾಳಿ ಮಳೆ ಕಂಡರೆ ಬಹಳ ಆನಂದ. ಧ್ಯಾನದ ಸಮಯದಲ್ಲಿ ಯಾರಾದರೂ ಆತನನ್ನು ಸಮೀಪಿಸಿದರೆ ಆತನಿಗೆ ಉಗ್ರ ಕೋಪ ಬಂದುಬಿಡುತ್ತಿತ್ತು. ಒಂದು ದಿನ ನಾನು ಹಾಗೇ ಹೋಗಿಬಿಟ್ಟೆ. ಸಮೀಪಿಸಿದ ಒಡನೆಯೇ ಆತನಿಗೆ ಬಹಳವಾಗಿ ಸಿಟ್ಟು ಬಂತು. ಯಾವಾಗ ನೋಡಿದರೂ 'ಬ್ರಹ್ಮ ಸತ್ಯಂ, ಜಗನ್ಮಿಥ್ಯಾ' ಅಂತ ವಿಚಾರದಲ್ಲಿ ತೊಡಗುತ್ತಿದ್ದ. ನಾನಾತ್ವಕ್ಕೆ ಮಾಯೆಯೇ ಕಾರಣವಾದ್ದರಿಂದ, ಕೈಯಲ್ಲಿ ಯಾವಾಗಲೂ ಗೊಂಚಲು ದೀಪದ ಒಂದು ಮುಪ್ಪಟ್ಟೆ ಗಾಜನ್ನು (ಪ್ರಿಸಮ್) ಇಟ್ಟುಕೊಂಡಿರುತ್ತಿದ್ದ. ಅದರ ಮೂಲಕ ನೋಡಿದರೆ ಅನೇಕ ಬಣ್ಣಗಳು ಕಣ್ಣಿಗೆ ಬೀಳುತ್ತವೆ. ಆದರೆ ವಾಸ್ತವಿಕವಾಗಿ ಯಾವ ಬಣ್ಣವೂ ಇಲ್ಲ. ಹಾಗೇನೆ ವಸ್ತುತಃ ಬ್ರಹ್ಮನ ಹೊರತು ಬೇರೇನೂ ಇಲ್ಲ. ಆದರೆ ಮಾಯೆಯ ದೆಸೆಯಿಂದ, ಅಹಂಕಾರದ ದೆಸೆಯಿಂದ, ನಾನಾತ್ವ ಕಣ್ಣಿಗೆ ಬೀಳುತ್ತದೆ. ಮಾಯೆಯ ಬಲೆಗೆ ಬೀಳಬೇಕಾಗಿ ಬರಬಹುದು, ಆಸಕ್ತಿಯುಂಟಾಗಬಹುದು — ಎಂದು ಹೆದರಿ ಯಾವ ವಸ್ತುವನ್ನೂ ಆತ ಒಂದು ಸಲಕ್ಕಿಂತ ಹೆಚ್ಚಾಗಿ ನೋಡುತ್ತಿರಲಿಲ್ಲ. ಸ್ನಾನದ ಸಮಯದಲ್ಲಿ ಹಕ್ಕಿ ಹಾರುವುದನ್ನು ನೋಡಿ ವಿಚಾರದಲ್ಲಿ ತೊಡಗುತ್ತಿದ್ದ.. ಇಲ್ಲಿ ಮೂರು ದಿನ ಮಾತ್ರ ಇದ್ದ. ಒಂದು ದಿನ ನದಿಯ ದಡದ ಹತ್ತಿರ ಕೊಳಲ ನಾದವನ್ನು ಕೇಳಿ ಹೇಳಿದ. 'ಯಾರಿಗೆ ಬ್ರಹ್ಮದರ್ಶನವಾಗಿದೆಯೋ, ಆತನ ಕಿವಿಗೆ ಇದು ಬಿತ್ತು ಎಂದರೆ, ಆತ ಸಮಾಧಿಸ್ಥನಾಗಿಬಿಡುತ್ತಾನೆ' ಎಂದು.

ಒಮ್ಮೆ ಒಬ್ಬ ಸಾಧುವಿಗೆ ತಡೆಯಲಾರದ ಬಾಯಾರಿಕೆಯಾಯಿತು. ಚಕ್ಕಳದಲ್ಲಿ ನೀರು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ವ್ಯಕ್ತಿ ನೀರು ಕೊಡಲು ಮುಂದೆ ಬಂದ. ಸಾಧು ಆತನನ್ನು ಕೇಳಿದ: 'ಏನು, ನಿನ್ನ ಚೀಲವನ್ನು ಚೆನ್ನಾಗಿ ತೊಳೆದಿದ್ದೀಯಾ?' ಆತ ಹೇಳಿದ: 'ಸ್ವಾಮಿ, ನನ್ನ ಚೀಲ ಸಂಪೂರ್ಣವಾಗಿ ಪರಿಶುದ್ಧವಾಗಿದೆ. ಆದರೆ ನಿಮ್ಮ ಚೀಲದೊಳಗೆ ಮಲ ಮೂತ್ರ, ಇನ್ನೂ ಏನೇನೋ ಕಶ್ಮಲ ತುಂಬಿವೆ. ಆದ್ದರಿಂದ ನಾನು ಹೇಳುತ್ತೇನೆ, ನೀವು ನಿಸ್ಸಂಕೋಚವಾಗಿ ನನ್ನ ಚೀಲದಿಂದ ನೀರು ಕುಡಿಯಬಹುದು. ಇದರಿಂದ ನಿಮಗೆ ಯಾವ ಕೇಡೂ ಸಂಭವಿಸದು.' 'ನಿಮ್ಮ ಚೀಲ' ಎಂಬುದಾಗಿ ಆ ನೀರು ಹೊರುವ ವ್ಯಕ್ತಿ ಹೇಳಿದುದರ ಅರ್ಥ ದೇಹ, ಹೊಟ್ಟೆ ಇತ್ಯಾದಿ.

ಹಿಮಾಲಯ ಪರ್ವತರಾಜನ ಮನೆಯಲ್ಲಿ ಭಗವತಿ ಜನ್ಮ ತಳೆದಾಗ ಆಕೆ ಅನೇಕ ರೂಪಗಳನ್ನು ಧರಿಸಿ ತನ್ನ ತಂದೆಗೆ ದರ್ಶನ ಕೊಟ್ಟಳು. ರಾಜ ಆಕೆಗೆ ತಿಳಿಸಿದ: 'ನನಗೆ ಬ್ರಹ್ಮದರ್ಶನ ಪಡೆಯಲು ಇಚ್ಛೆಯಾಗುತ್ತಿದೆ.' ಅದಕ್ಕೆ ಭಗವತಿ ಹೇಳಿದಳು: 'ಹೇ ತಂದೆ, ನಿಮಗೆ ಆ ಇಚ್ಛೆಯುಂಟಾಗಿರುವುದಾದರೆ, ನೀವು ಸಾಧುಸಂಗ ಮಾಡಬೇಕು. ಸಂಸಾರವನ್ನು ಬಿಟ್ಟು ನಿರ್ಜನ ಪ್ರದೇಶದಲ್ಲಿದ್ದು ಆಗಾಗ ಸಾಧುಸಂಗ ಮಾಡಿ.'

ಸಾಧುಗಳು ಭಗವಂತನ ಮೇಲೆ ತಮ್ಮ ಭಾರವನ್ನು ಸಂಪೂರ್ಣವಾಗಿ ಹಾಕಬೇಕು. ಅವರು ಸಂಚಯ ಮಾಡಿಡಕೂಡದು. ಆದರೆ ಈ ನಿಯಮ ಸಂಸಾರಿಗಳಿಗಲ್ಲ. ಸಂಸಾರಿ ತನ್ನ ಸಂಸಾರಪೋಷಣೆ ಮಾಡಬೇಕಾಗಿದೆ; ಆದ್ದರಿಂದ ಆತನಿಗೆ ಸಂಚಯದ ಆವಶ್ಯಕತೆ ಇದೆ. ಹಕ್ಕಿ ಮತ್ತು ಸಾಧು ಸಂಚಯ ಮಾಡಿ ಇಡುವುದಿಲ್ಲ.

**ಶ್ರೀರಾಮಕೃಷ್ಣ ವಚನವೇದದಿಂದ**